1092 (1519) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ಗಡಿ ಪ್ರದೇಶವಾದ ಚಾಮರಾಜನಗರ ಜಿಲ್ಲೆಯೂ ಸೇರಿದಂತೆ ರಾಜ್ಯದಾದ್ಯಂತ ಇರುವ ಅರಣ್ಯ ಪ್ರದೇಶಗಳಾವುವು ಹಾಗೂ ಅವು ಎಲ್ಲೆಲ್ಲಿವೆ;

ಆ) ಒತ್ತುವರಿ ಅರಣ್ಯ ಪ್ರದೇಶಗಳನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಯಾವ ಯಾವ ಪ್ರದೇಶಗಳಲ್ಲಿ ಒತ್ತುವರಿ ಮಾಡಲಾಗಿದೆ;

ಈ) ಒತ್ತುವರಿ ಮಾಡಿಕೊಂಡಿರುವವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ಅರಣ್ಯ ಪ್ರದೇಶದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಅನುಬಂಧ–1ರಲ್ಲಿ ವಿವರಗಳನ್ನು ಲಗತ್ತಿಸಿದೆ.

ಆ) ಅಕ್ರಮ ಒತ್ತುವರಿಯಲ್ಲಿದ್ದ ಪ್ರದೇಶವನ್ನು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64 (ಎ) ಪ್ರಕಾರ ನೋಟೀಸ್ ನೀಡಿ ಖಿಲ್ಲಾಪಡಿಸುವ ಕ್ರಮ ಜರುಗಿಸಲಾಗುತ್ತಿದೆ. ಅದರಂತೆ ಇದುವರೆಗೂ 40951 ಪ್ರಕರಣಗಳಲ್ಲಿ 42154 ಹೆ. ಪ್ರದೇಶವನ್ನು ತೆರವುಗೊಳಿಸಲಾಗಿದೆ. ಇನ್ನೂ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.

ಇ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಟ್ಟು 108311 ಹೆ. ಅರಣ್ಯ ಪ್ರದೇಶವು ಒತ್ತುವರಿಯಾಗಿದ್ದು ಈ ಪೈಕಿ ಇದುವರೆಗೂ 42154 ಹೆ. ಪ್ರದೇಶಗಳನ್ನು ಖಿಲ್ಲಾ ಪಡಿಸಿ ಅರಣ್ಯ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲಾಗಿದೆ.

ಈ) ಅಕ್ರಮ ಒತ್ತುವರಿಯನ್ನು ಮಾಡಿರುವವರ ಮೇಲೆ ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್ 64 (ಎ) ಪ್ರಕಾರ ನೋಟೀಸ್ ನೀಡಿ ಖಿಲ್ಲಾಪಡಿಸುವ ಕ್ರಮ ಜರುಗಿಸಲಾಗುತ್ತಿದೆ. ಕೆಲವು ಪ್ರಕರಣಗಳು ವಿಚಾರಣೆ ಹಂತದಲ್ಲಿದ್ದು ಕೆಲವು ನ್ಯಾಯಾಲಯದ ಮುಂದಿವೆ.

ಉ) ಅರಣ್ಯ ಪ್ರದೇಶದ ಅಭಿವೃದ್ಧಿಗೆ ಸರ್ಕಾರವು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ.

1. ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡಿದಾಗ ಅದರ ಬದಲಿಗೆ ಪರಿಹಾರಾತ್ಮಕ ನೆಡುತೋಪು ಬೆಳೆಸಲಾಗುತ್ತದೆ.
2. ಅರಣ್ಯಗಳ ರಕ್ಷಣೆ, ಸಂರಕ್ಷಣೆಯ ಬಗ್ಗೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜೆ.ಬಿ.ಐ.ಸಿ. ಮತ್ತು ಅಭಿವೃದ್ಧಿಯ ನೆರವಿನ ಕೆ.ಎಸ್.ಎಂ.ಬಿ.ಸಿ. ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.
3. ಅರಣ್ಯ ಅಭಿವೃದ್ಧಿ ಸಂಘಗಳ ಮೂಲಕ ಅನುಷ್ಠಾನಗೊಳಿಸಬೇಕಾದ ಕೇಂದ್ರ ನೆರವಿನ ರಾಷ್ಟ್ರೀಯ ಅರಣ್ಯೀಕರಣ ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

4. ಕಳೆದ ಮೂರು ವರ್ಷಗಳಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಈ ಕೆಳಗಿನಂತೆ ಅರಣ್ಯೀಕರಣ ಕಾಮಗಾರಿಯನ್ನು ನಿರ್ವಹಿಸಲಾಗಿದೆ.

(ಹೆಕ್ಟೇರುಗಳಲ್ಲಿ)

2003–04 20,238.00

2004–05 39,904.45

2005–06 42,407.75

## ANNEXURE-3

## DISTRICT WISE FOREST AREA BY LEGAL STATUS AS ON 2005-2006

## (Provisional)

(Area in Square Kilometer)

| Sl. NO | District | Reserved | Protected | Unclassified | Village | Private | Total |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | Bangalore-U | 45.86 | 27.78 | - | - | - | 73.64 |
| 2 | Bangalore-R | 1078.11 | 8.27 | - | 8.00 | - | 1094.38 |
| 3 | Belgaum | 2057.42 | 11.78 | 52.94 | - | 123.43 | 2245.57 |
| 4 | Bellary | 1236.21 | - | 477.59 | - | 29.73 | 1743.53 |
| 5 | Bidar | 63.35 | 90.89 | 328.07 | - | - | 482.31 |
| 6 | Bijapur | 824.19 | 0.11 | 3.28 | - | - | 827.58 |
| 7 | Bagalkote | | | | | | |
| 8 | Chickmagalur | 1431.72 | 184.32 | 555.29 | 7 75 | - | 2179.08 |
| 9 | Chitradurga | 958.30 | 5.05 | 593.60 | 5 34 | - | 1562.29 |
| 10 | Davangere | | | | | | |
| 11 | Dakshina Kannada | 2121.43 | 1563.62 | 1408.64 | - | 88.61 | 5182.30 |
| 12 | Udupi | | | | | | |
| 13 | Dharwad | | | | | | |
| 14 | Gadag | 1271.54 | 14.01 | 93.21 | - | 57.97 | 1436.73 |
| 15 | Haveri | | | | | | |
| 16 | Gulbarga | 345.64 | - | 785.61 | 6.60 | - | 1137.85 |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 17 | Hassan | 448.71 | - | 86.95 | 5.41 | - | 541.07 |
| 18 | Kodagu | 1136.46 | 27.14 | 95.92 | - | - | 1259.52 |
| 19 | Kolar | 877.93 | 43.31 | 61.56 | 56.61 | - | 1039.41 |
| 20 | Mandya | 137.19 | 6.06 | 128.56 | - | - | 271.81 |
| 21 | Mysore | 3875.59 | 3.17 | 250.86 | - | - | 4129.62 |
| 22 | Chamrajnagar | | | | | | |
| 23 | Raichur | 331.17 | 91.95 | 227.65 | - | - | 650.77 |
| 24 | Koppal | | | | | | |
| 25 | Shimoga | 1945.72 | 1289.28 | 21.57 | 13.59 | - | 3270.16 |
| 26 | Tumkur | 775.58 | 21.21 | 59.70 | - | 8.68 | 865.17 |
| 27 | U. Kannada | 7727.84 | 542.77 | 59.90 | - | | 8291.51 |
| | **Total** | **28689.96** | **3930.72** | **5231.00** | **124.20** | **308.42** | **38284.30** |

1093 (1520) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯದಾದ್ಯಂತ ಪ್ರಧಾನ ಮಂತ್ರಿಗಳ ರೋಜಗಾರ್ ಯೋಜನೆಯಡಿಯಲ್ಲಿ ಸಾಲ ಪಡೆದಿರುವವರ ಸಂಖ್ಯೆ ಎಷ್ಟು;

ಆ) ಈ ಯೋಜನೆಯಡಿಯಲ್ಲಿ ಸಾಲ ಪಡೆದವರಿಗೆ ಸರ್ಕಾರದ ವತಿಯಿಂದ ಎಷ್ಟು ಸಹಾಯ ಧನವನ್ನು ನೀಡಲಾಗುತ್ತಿದೆ;

ಇ) ಈ ಯೋಜನೆಯಡಿ ಸಾಲವನ್ನು ಕೋರಿ ಇಲ್ಲಿಯವರೆಗೆ ಬಂದಿರುವ ಅರ್ಜಿಗಳೆಷ್ಟು;

ಈ) ಸಾಲವನ್ನು ಮಂಜೂರು ಮಾಡದಿರುವ ಫಲಾನುಭವಿಗಳಿಗೆ ಯಾವಾಗ ಸಾಲವನ್ನು ಮಂಜೂರು ಮಾಡಲಾಗುವುದು?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯದಲ್ಲಿ ಈ ಯೋಜನೆಯಡಿ 1993–94ರಿಂದ 2005–06ನೇ ಸಾಲಿನ ವರೆವಿಗೆ 182254 ಫಲಾನುಭವಿಗಳು ಸಾಲ ಪಡೆದಿರುತ್ತಾರೆ.

ಆ) ಈ ಯೋಜನೆಯಡಿಯಲ್ಲಿ ಸಾಲ ಪಡೆದವರಿಗೆ ಯೋಜನಾ ವೆಚ್ಚದ ಮೇಲೆ ಶೇ.15 ರಂತೆ ರೂ. 7500/– ಗಳಿಗೆ ಮಿತಿಗೊಳಪಟ್ಟಂತೆ ಸಹಾಯಧನವನ್ನು ಕೇಂದ್ರ ಸರ್ಕಾರದಿಂದ ನೀಡಲಾಗುತ್ತಿದೆ.

ಇ) ಈ ಯೋಜನೆಯಡಿ 1993–94ರಿಂದ 2005–06ನೇ ಸಾಲಿನವರೆವಿಗೆ 8,31,194 ಅರ್ಜಿಗಳು ಬಂದಿವೆ.